ST-AR

# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 25
ಸದಸ್ಯರ ಹೆಸರು : ಶ್ರೀ ಸುನೀಲ್ ವಲ್ಯಾಪುರ್
(ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ : 09.12.2024
(ಅರಣ್ಯ ಇಲಾಖೆಯಿಂದ ವರ್ಗಾವಣೆ ಆಗಿರುವುದು)
ಉತ್ತರಿಸುವ ಸಚಿವರು : ಕಂದಾಯ ಸಚಿವರು.

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಪರಿಶಿಷ್ಟ ಜಾತಿ / ಪಂಗಡ ಜನಾಂಗದವರಿಗೆ ಸರ್ಕಾರದಿಂದ ಮಂಜೂರಾದ ಕಂದಾಯ /ಅರಣ್ಯ ಇಲಾಖೆಯ ಒಟ್ಟು ಭೂಮಿಯ ಪ್ರಮಾಣ ಎಷ್ಟು : (ತಾಲ್ಲೂಕುವಾರು ಅಳತೆಯ ವಿವರಗಳ ಮಾಹಿತಿ ನೀಡುವುದು) | ರಾಜ್ಯದಲ್ಲಿ ಪರಿಶಿಷ್ಟ ಜಾತಿ / ಪಂಗಡದ ಜನಾಂಗದವರಿಗೆ ಸರ್ಕಾರದಿಂದ ಮಂಜೂರಾದ ಕಂದಾಯ ಭೂಮಿ 483767-29 ಎಕರೆ/ಗುಂಟೆ ಅರಣ್ಯ ಭೂಮಿ 11683-24 ಎಕರೆ/ಗುಂಟೆ ಒಟ್ಟು ಭೂಮಿ : 495451-13 ಎಕರೆ /ಗುಂಟೆ ಇರುತ್ತದೆ.<br><br>ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ. |
| ಆ) | ಅರಣ್ಯ ಇಲಾಖೆಯಿಂದ ಪರಿಶಿಷ್ಟ ಜಾತಿ / ಪಂಗಡದವರಿಗೆ ಮಂಜೂರಾದ ಭೂಮಿಯನ್ನು ಇಲಾಖೆಯವರು ವಶಪಡಿಸಿಕೊಂಡಿದ್ದು, ಅವರಿಗೆ ಪರ್ಯಾಯವಾಗಿ ಭೂಮಿ ಅಥವಾ ಹಣ ನೀಡುವ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು : | ಅರಣ್ಯ ಇಲಾಖೆಯಿಂದ ಪರಿಶಿಷ್ಟ ಜಾತಿ / ಪಂಗಡದವರಿಗೆ ಯಾವುದೇ ಅರಣ್ಯ ಭೂಮಿಯನ್ನು ಮಂಜೂರು ಮಾಡಿರುವುದಿಲ್ಲ. ಅನಧಿಕೃತವಾಗಿ ಅರಣ್ಯ ಭೂಮಿಯನ್ನು ಒತ್ತುವರಿ ಮಾಡಿದಲ್ಲಿ ಕರ್ನಾಟಕ ಅರಣ್ಯ ಕಾಯ್ದೆ, 1963ರ ಕಲಂ 64-ಎ ಪ್ರಕಾರ ಒತ್ತುವರಿಯನ್ನು ತೆರವುಗೊಳಿಸಲು ನಿಯಮಾನುಸಾರ ಕ್ರಮ ಕ್ರಮಕೈಗೊಳ್ಳಲಾಗುವುದು. ಅರಣ್ಯ ಇಲಾಖೆಯಿಂದ ಪರ್ಯಾಯವಾಗಿ ಭೂಮಿ ಅಥವಾ ಹಣ ನೀಡಲು ಅವಕಾಶವಿರುವುದಿಲ್ಲ. |
| ಇ) | ಬೆಂಗಳೂರು ಗ್ರಾಮಾಂತರ ಜಿಲ್ಲೆ ಆನೇಕಲ್ ತಾಲ್ಲೂಕಿನ ಬೂತನಹಳ್ಳಿ ಗ್ರಾಮದ ಸರ್ವೆ ನಂ. 67ರಲ್ಲಿ ಭೋವಿ ಜನಾಂಗದವರಿಗೆ ಸರ್ಕಾರ ಆದೇಶ ಸಂಖ್ಯೆ: 453/59-60 ಆದೇಶದಲ್ಲಿ 137 ಅನುಭವದಾರರಿಗೆ 323-21 ಎಕರೆ/ಗುಂಟೆ ವಿಸ್ತೀರ್ಣ ವ್ಯವಸಾಯ ಮಾಡಿಕೊಳ್ಳಲು ಸರ್ಕಾರದಿಂದ ಮಂಜೂರಾಗಿದ್ದು; ಈಗ ಅರಣ್ಯ ಇಲಾಖೆಯವರು ಭೋವಿ | ಆನೇಕಲ್ ತಾಲ್ಲೂಕು ಜಿಗಣಿ ಹೋಬಳಿ, ಭೂತಾನಹಳ್ಳಿ ಗ್ರಾಮದ ಸ.ನಂ. 64 ಮತ್ತು 67ರಲ್ಲಿ ಭೋವಿ ಜನಾಂಗದವರಿಗೆ ಸರ್ಕಾರದ ಆದೇಶ ಸಂಖ್ಯೆ: 453/59-60 ರಂತೆ ಒಟ್ಟು 137 ಅನುಭವದಾರರಿಗೆ ಒಟ್ಟು 323-21 ಎಕರೆ/ಗುಂಟೆ ಜಮೀನನ್ನು ವ್ಯವಸಾಯದ ಉದ್ದೇಶಕ್ಕಾಗಿ ಮಂಜೂರು ಮಾಡಲಾಗಿರುತ್ತದೆ.<br><br>ಆದರೆ, ಸದರಿ ಸರ್ವೆ ನಂ. 67ರಲ್ಲಿ ಸರ್ಕಾರದ ಆದೇಶ ಸಂಖ್ಯೆ: ಜಿ-6416-ಎಫ್‌ಟಿ 27-33-35 |

| | | |
|---|---|---|
| | ಜನಾಂಗದವರಿಗೆ ವ್ಯವಸಾಯ ಮಾಡಲು ತೊಂದರೆ ಕೊಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಈ ಬಗ್ಗೆ ತೆಗೆದುಕೊಂಡ ಕ್ರಮವೇನು; | ದಿನಾಂಕ: 17.03.1934ರಲ್ಲಿ ಆನೇಕಲ್ ತಾಲ್ಲೂಕು, ಜಿಗಣಿ ಹೋಬಳಿ, ಭೂತಾನಹಳ್ಳಿ ಗ್ರಾಮ ಸ.ನಂ. 67ರಲ್ಲಿ 525 ಎಕರೆ ಒಳಗೊಂಡಂತೆ 539-27 ಎಕರೆ/ಗುಂಟೆ ಪ್ರದೇಶವನ್ನು ಅಧಿಸೂಚಿತ ಕಿರು ಅರಣ್ಯ ಪ್ರದೇಶವೆಂದು ಘೋಷಣೆ ಮಾಡಲಾಗಿದೆ.<br><br>ಭೂತಾನಹಳ್ಳಿ ಗ್ರಾಮ ಸ.ನಂ. 67ರಲ್ಲಿ ಒತ್ತುವರಿ ಮಾಡಿದ್ದ 80 ಜನ ವಿರುದ್ಧ ಅರಣ್ಯ ಮೊಕದ್ದಮೆ ದಾಖಲಾಗಿದ್ದು, ಸದರಿ ಒತ್ತುವರಿದಾರರ ಪೈಕಿ 60 ಜನರ ವಿರುದ್ಧ ವಿಶೇಷ ಜಿಲ್ಲಾಧಿಕಾರಿಯವರ ದಿನಾಂಕ: 01.04.2010ರ ಆದೇಶದನ್ವಯ ಸದರಿ ಭೂ ಮಂಜೂರಾತಿಗಳನ್ನು ರದ್ದುಪಡಿಸಿ, ಪಹಣಿ ಕಾಲಂ 9ರಲ್ಲಿ ಭೂತಾನಹಳ್ಳಿ ಕಿರು ಅರಣ್ಯ ಪ್ರದೇಶವೆಂದು ಇಂಡೀಕರಣ ಮಾಡಲಾಗಿದೆ.<br><br>ಮುಂದುವರಿದು, 2012ನೇ ಸಾಲಿನಲ್ಲಿ ಸ.ನಂ. 67ರಲ್ಲಿ ಅರಣ್ಯ ಪ್ರದೇಶದಲ್ಲಿ ಅನಧಿಕೃತವಾಗಿರುವ 19 ಜನ ಒತ್ತುವರಿದಾರರ ಪರವಾಗಿ ವಿಶೇಷ ಜಿಲ್ಲಾಧಿಕಾರಿಯವರು ಮಂಜೂರಾತಿ ಆದೇಶ ಮಾಡಿರುತ್ತಾರೆ.<br><br>ಸದರಿ ಆದೇಶದ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 46913/2013 ದಾಖಲಾಗಿದ್ದು ಪ್ರಕರಣವು ವಿಚಾರಣೆಯಲ್ಲಿದೆ. |
| ಈ) | ಸುಮಾರು ವರ್ಷಗಳ ಹಿಂದೆ ಸರ್ಕಾರವು ಬಡ ಭೋವಿ ಜನಾಂಗದವರಿಗೆ ಅರಣ್ಯವೆಂದು ಘೋಷಣೆಯಾದ ಜಮೀನಿನಲ್ಲಿ ರೈತರು ಸಾಗುವಳಿ ಮಾಡಿ ಸಾಗುವಳಿ ಚೀಟಿ ಪಡೆದಿದ್ದರೆ ಅರಣ್ಯವೆಂದು ಘೋಷಣೆಯಾಗಿರುವುದನ್ನು ಕೈಬಿಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸೂಚಿಸಿದಾಗ ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ವರದಿ ಸಲ್ಲಿಸಿದ್ದು ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು? | ತಹಶೀಲ್ದಾರ್ ಆನೇಕಲ್ ತಾಲ್ಲೂಕು ರವರು ಉಪವಿಭಾಗಾಧಿಕಾರಿಗಳು, ಬೆಂಗಳೂರು ದಕ್ಷಿಣ ಉಪವಿಭಾಗ ರವರ ಮೂಲಕ ಜಿಲ್ಲಾಧಿಕಾರಿಗಳಿಗೆ ವರದಿ ಸಲ್ಲಿಸಿ, ಸರಿ ಸುಮಾರು 60 ವರ್ಷಗಳಿಂದ ಭೂತಾನಹಳ್ಳಿಯ ಪರಿಶಿಷ್ಟ ಜಾತಿಯ ಭೋವಿ ಜನಾಂಗದವರು ಸಾಗುವಳಿ ಮಾಡಿಕೊಂಡು ಅನುಭವಿಸಿಕೊಂಡು ಬಂದಿರುವುದು ದಾಖಲೆಗಳಿಂದ ತಿಳಿದುಬಂದಿರುತ್ತದೆ. ಸದರಿ ಸರ್ವೆ ನಂಬರ್‌ಗಳಲ್ಲಿನ ಭಾಗಶಃ ಜಮೀನುಗಳನ್ನು ಕಿರು ಅರಣ್ಯ ಪ್ರದೇಶವೆಂದು ಅಧಿಸೂಚನೆ ಹೊರಡಿಸಲಾಗಿದೆ.<br><br>ಅರಣ್ಯ ಭೂಮಿಯನ್ನು ಮಂಜೂರು ಮಾಡಲು ಅರಣ್ಯ ಕಾಯ್ದೆಯನ್ನು ಹೊರತುಪಡಿಸಿ ಬೇರೆ ಯಾವುದೇ ಕಾನೂನಿನಡಿ ಅವಕಾಶವಿರುವುದಿಲ್ಲ. |

| | | |
|---|---|---|
| | | ಅರಣ್ಯ ಭೂಮಿಯನ್ನು ಮಂಜೂರು ಮಾಡುವ ಪೂರ್ವದಲ್ಲಿ ಡೀನೋಟಿಫೈ ಮಾಡಿ, ಆದೇಶ ಹೊರಡಿಸಬೇಕಾಗಿರುತ್ತದೆ.<br><br>ಕರ್ನಾಟಕ ಅರಣ್ಯ ಕಾಯ್ದೆ 1963 ರ ಕಲಂ 4 (1) (a,b,c ) ಈ ಕೆಳಕಂಡಂತೆ ಇರುತ್ತದೆ.<br><br>Whenever it has been decided to constitute any land a reserved forest the State Government shall issue a notification:-<br><br>a) Declaring that it has been decided to constitute such land a reserved forest;<br>b) Specifying, as nearly as possible, the situation and limits of such land; and<br>c) Appointing an officer (here in after called the "Forest Settlement Officers) to inquire into and determine the existence, nature and extent of any rights claimed by or alleged to exist in favour of any person in or over any land comprised within such limits or in or over any forest produce, and to deal with the same as provided in this Chapter<br><br>ಅದರಂತೆ ವಿಷಯದ ಬಗ್ಗೆ ಖುದ್ದು ಪರಿಶೀಲಿಸಿ, ಹಂತ-ಹಂತವಾರು ಕೈಗೊಳ್ಳಬೇಕಾದ ಕ್ರಮದ ಬಗ್ಗೆ ಕ್ರಮಕೈಗೊಂಡು, ವರದಿಯನ್ನು ಸಲ್ಲಿಸಲು ಉಪವಿಭಾಗಾಧಿಕಾರಿಗಳು, ಬೆಂಗಳೂರು ದಕ್ಷಿಣ ಉಪವಿಭಾಗ ರವರಿಗೆ ಸೂಚನೆ ನೀಡಲಾಗಿರುತ್ತದೆ. |

ಸಂಖ್ಯೆ: ಆರ್‌ಡಿ 104 ಎಲ್‌ಜಿಕ್ಯೂ 2024

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು

ಅನುಬಂಧ

| ಕ್ರ.ಸಂ. | ಜಿಲ್ಲೆ | ಕಂದಾಯ ಜಮೀನು | | ಅರಣ್ಯ ಭೂಮಿ | |
|---|---|---|---|---|---|
| | | ಎಕರೆ | ಗುಂಟೆ | ಎಕರೆ | ಗುಂಟೆ |
| 1 | ಬೆಂಗಳೂರು ನಗರ | 20890 | 4 | 780 | |
| 2 | ಬೆಂಗಳೂರು ಗ್ರಾಮಾಂತರ | 15945 | | | |
| 3 | ಬೆಳಗಾವಿ | 9414 | | 138 | 4 |
| 4 | ಬಳ್ಳಾರಿ | 2352 | 51 | | |
| 5 | ಬಾಗಲಕೋಟೆ | 326 | 8 | 229 | 5 |
| 6 | ಬೀದರ | 20206 | 18 | 746 | 33 |
| 7 | ಚಾಮರಾಜನಗರ | 5304 | 31 | 2081 | |
| 8 | ಚಿಕ್ಕಬಳ್ಳಾಪುರ | 44537 | 32 | | |
| 9 | ಚಿಕ್ಕಮಗಳೂರು | 21788 | 12 | | |
| 10 | ಚಿತ್ರದುರ್ಗ | 47412 | 4 | 620 | 12 |
| 11 | ದಕ್ಷಿಣ ಕನ್ನಡ | 23032 | 18 | | |
| 12 | ದಾವಣಗೆರೆ | 17266 | 41 | | |
| 13 | ಧಾರವಾಡ | 3224 | 15 | | |
| 14 | ಗದಗ | 869 | 1 | 0 | |
| 15 | ಹಾಸನ | 37435 | 5 | | |
| 16 | ಹಾವೇರಿ | 7892 | 22 | | |
| 17 | ಕಲಬುರಗಿ | 14796 | 12 | | |
| 18 | ಕೊಡಗು | 2403 | 20 | | |
| 19 | ಕೊಪ್ಪಳ | 8733 | 33 | | |
| 20 | ಕೋಲಾರ | 27985 | 39 | 73 | 3 |
| 21 | ಮಂಡ್ಯ | 9978 | 15 | | |
| 22 | ಮೈಸೂರು | 24375 | 32 | | |
| 23 | ರಾಮನಗರ | 7665 | 15 | 740 | 5 |
| 24 | ರಾಯಚೂರು | 7935 | 14 | | |
| 25 | ಶಿವಮೊಗ್ಗ | 24651 | 23 | 2668 | 16 |
| 26 | ತುಮಕೂರು | 38674 | 20 | | |
| 27 | ಉಡುಪಿ | 4184 | 40 | 261 | 20 |
| 28 | ಉತ್ತರ ಕನ್ನಡ | 1903 | 11 | 3345 | 6 |
| 29 | ವಿಜಯನಗರ | 20905 | 1 | | |
| 30 | ವಿಜಯಪುರ | 2940 | 12 | | |
| 31 | ಯಾದಗಿರಿ | 8735 | | | |
| | ಒಟ್ಟು | 483767 | 29 | 11683 | 24 |